**OS .No. 45/2018**
**D.W-1**

**( ದಿನಾಂಕ.22-02-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಪ್ರತಿವಾದಿ 6 ಶ್ರೀ.G.V.T. ವಕೀಲರಿಂದ

ನಾನು ಅಂಗನವಾಡಿ ಟೀಚರ ಇದ್ದು ತಿರ್ಥದಲ್ಲಿ ವಾಸವಾಗಿದ್ದೆ ಎಂದರೆ ಸರಿ. ನನ್ನ ಮದುವೆ ತೀರ್ಥ ತಾಂಡಾದಲ್ಲಿ ಆಗಿದೆ ಎಂದರೆ ಸರಿ. ನನ್ನ ಗಂಡನ ಊರು ಕಲಬುರುಗಿ ಎಂದರೆ ಸರಿ. ಕೇಸುಬಾಯಿ ಹೆಸರಲ್ಲಿ ಇರುವ ಜಮೀನು 4 ಎಕರೆ 30 ಗುಂಟೆ ಇವರ ಸ್ವಂತ ಆಸ್ತಿ ಎಂದರೆ ಸರಿ. ಕೇಸುಬಾಯಿ ನನ್ನ ಸಂಗಡ ವಾಸವಾಗಿದ್ದಾಳೆ. ಈಗ ಸಾಕ್ಷಿ ಮುಂದುವರೆದು ಈಗ ಪ್ರತಿವಾದಿ 6 ರವರ ಹತ್ತಿರ ಹೋಗಿ ವಾಸವಾಗಿದ್ದಾಳೆ ಅಂತ ಉತ್ತರಿಸುತ್ತಾರೆ. ಕೇಸುಬಾಯಿ ಈಗ ಆರಾಮದಿಂದ ಇದ್ದು ಗಟ್ಟಿಮುಟ್ಟಾಗಿದ್ದಾಳೆ ಎಂದರೆ ಸರಿ. ಕೇಸುಬಾಯಿ ಮಾನಸಿಕವಾಗಿ ಸ್ವಸ್ಥ ಇದ್ದಾಳೆ ಎಂದರೆ ಸರಿ. ನಾನು ಕೇಸುಬಾಯಿಯನ್ನು ಬೆದರಿಸಿ 4 ಎಕರೆ 30 ಗುಂಟೆ ಜಮೀನಿಗೆ ವಿಲ್ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಿಲಡಿಡನಲ್ಲಿ ಲಲಿತಾಬಾಯಿ ಸಹಿ ಇದೆ ಎಂದರೆ ಸರಿ. ಲಲಿತಾಬಾಯಿ ಹೆಸರಲ್ಲಿ ವಿಲಡಿಡಗೆ ಬೇರೆಯರ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಲಲಿತಾಬಾಯಿ ಸ್ವತಃ ಬಂದು ಸಹಿ ಮಾಡಿದ್ದಾಳೆ ಎಂದು ಉತ್ತರಿಸುತ್ತಾರೆ. ಕೇಸುಬಾಯಿಗೆ ಆರಾಮವಿಲ್ಲದಾಗ ಅವಳನ್ನು ಲಲಿತಾಬಾಯಿ ಚಿಕಿತ್ಸೆ ಕೊಡಿಸಿದ್ದಾಳೆ ಎಂದರೆ ಸರಿಯಲ್ಲ. ತಾಂಡಾದಲ್ಲಿ ನಾನು ಮತ್ತು ಲಲಿತಾಬಾಯಿ ಕೂಡಿ ಇದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕೇಸುಬಾಯಿ ಲಲಿತಾಬಾಯಿಗೆ ಕೊಡುತ್ತೇನೆ ಎಂದು ಹೇಳಿದ್ದಳು ಎಂದರೆ ಸರಿಯಲ್ಲ. ಕೇಸುಬಾಯಿ ದಾವಾ ಸ್ವತ್ತನ್ನು ಲಲಿತಾಬಾಯಿಗೆ ಕೊಡುತ್ತಾಳೆ ಎಂಬ ಉದ್ದೇಶದಿಂದ ನಾನು ವಿಲ ಡಿಡನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕೇಶುಬಾಯಿಯನ್ನು ಈ ಕೇಸಿನಲ್ಲಿ ವಿಲ್ ಡಿಡ್ ಬಗ್ಗೆ ವಿಚಾರಣೆ ಮಾಡುವುದಿಲ್ಲ.

**OS .No. 45/2018**

**D.W-1**

ನನ್ನ ತಂದೆ ಹೆಸರಲ್ಲಿ ಇದ್ದ 3 ಎಕರೆ 30 ಗುಂಟೆ ಜಮೀನು ನನ್ನ ತಂದೆ ವಿಲ್ ಮಾಡಿದ್ದಾರೆ. ಪಹಣಿಯಲ್ಲಿ ಮೊದಲಿನಿಂದಲೂ ನನ್ನ ಹೆಸರು ಇತ್ತು. ಪಹಣಿಯಲ್ಲಿ ನಾಮದೇವನ ಹೆಸರು ಇರಲಿಲ್ಲ. 3 ಎಕರೆ 30 ಗುಂಟೆ ಜಮೀನು ಮೊದಲು ನನ್ನ ತಾತಾ ಡಾಕಪ್ಪನ ಹೆಸರಲ್ಲಿ ಇತ್ತು ನಂತರ ಆತನ ಮಗ ನಾಮದೇವನ ಹೆಸರಲ್ಲಿ ದಾಖಲಾಗಿತ್ತು ಎಂದರೆ ಸರಿಯಲ್ಲ ಮತ್ತು ಅದು ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಮನೆ ಹಿರಿಯರ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಾಗ ನನ್ನ ತಂದೆಯದು ಆದರೆ ಮನೆ ನಾನೇ ಕಟ್ಟಿದ್ದೇನೆ ಅಂತ ಉತ್ತರಿಸುತ್ತಾರೆ. ಮನೆಯನ್ನು ಲಲಿತಾಬಾಯಿ ಕಟ್ಟಿಸಿದ್ದಾಳೆ ಎಂದರೆ ಸರಿಯಲ್ಲ. ಮನೆಯಲ್ಲಿ ಲಲಿತಾಬಾಯಿಗೂ ಸಹಿ ಪಾಲು ಇದೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿ ಆಸ್ತಿಯನ್ನು ನಾನೇ ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ವಿಲ್ ಡಿಡ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಇರುವ ಎರಡು ಪ್ಲಾಟಗಳು ನನ್ನ ತಂದೆ ಸ್ವಂತ ಗಳಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಕೇಶುಬಾಯಿ ಆಸ್ತಿ ಬಿಟ್ಟು ಉಳಿದ ಎಲ್ಲ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಮೋಸ ಮಾಡುವ ಉದ್ದೇಶದಿಂದ ಎಲ್ಲ ಆಸ್ತಿಗಳ ಬಗ್ಗೆ ವಿಲ್ ಡಿಡ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಪಂಚಾಯತಿ ನಡೆದಿದ್ದು ಆದರೆ ಯಾವ ದಿನಾಂಕ ಅಂತ ನೆನಪಿಲ್ಲ ಆದರೆ 2009 ರಲ್ಲಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**